(ಇಂದು ದಿನಾಂಕ:18-03-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

<u>ಪಾಟೀಸವಾಲು: ವಾದಿಯರ ಪರ ಶ್ರೀ ಎಸ್ ಎಸ್ ವಕೀಲರಿಂದ:</u>

1. ನಾನು ಮತ್ತು ಪ್ರತಿವಾದಿ ಗದಗದವರು, ವಾದಿಯ ಪರಿಚಯ ಇರುತ್ತದೆ. ನಿಪಿ-1 ಖರೀದಿ ಕರಾರು ಪತ್ರದ ಬಗ್ಗೆ ನನಗೆ ಏನು ಮಾಹಿತಿ ಇಲ್ಲ, ಸಹಿ ಮಾಡು ಎಂದಿದ್ದರಿಂದ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ವ್ಯವಹಾರದ ಬಗ್ಗೆ ಏನೂ ಗೊತ್ತಿಲ್ಲದಿದ್ದರೂ ಕೂಡಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಎಷ್ಟು ಬಾರಿ ಪ್ರತಿವಾದಿಯರನ್ನು ವಿನಂತಿಸಿದರೂ ಕೂಡಾ ವಾದಿ ಖರೀದಿ ಪತ್ರವನ್ನು ನೊಂದಣಿ ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗೆ ಎಂದಿಗೂ ಭೇಟಿಯಾಗಿಲ್ಲ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ನಾನು, ವಾದಿ ಮತ್ತು ವಾದಿ ಗಂಡನಿಗೆ ಹಲವಾರು ಬಾರಿ ಭೇಟಿಯಾಗಿದ್ದೇವೇ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ವಾದಿ ಸರ್ವೇ ಮ್ಯಾಪ್ ಮೊದಲೇ ಸಿದ್ದಪಡಿಸಿದ್ದರು ಎಂದರೆ ಸರಿಯಲ್ಲ. ವಾದಿಯರು ಖರೀದಿ ಪತ್ರ ಮಾಡಿಸಿಕೊಡಲು ಸದಾ ಸಿದ್ದರಾಗಿದ್ದರು ಪ್ರತಿವಾದಿಯೇ ಮಾಡಿಸಿಕೊಳ್ಳಲಿಲ್ಲ ಎಂದರೆ ಸರಿಯಲ್ಲ. ವಾದಿ ನೊಂದಣೆಗಾಗಿ ದಾಖಲೆ ಕೊಡಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು